**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 1227/2017**

ದಿನಾಂಕಃ 19-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಮಹಜರ್ ಸಮಯದಲ್ಲಿ ಅಮಾನತ್ತುಪಡಿಸಿಕೊಳ್ಳಲಾದ ಒಂದು ಕಾಲೇಜಿನ ಬ್ಯಾಗ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮ-1 ಎಂದು, ಒಂದು ಖಾಕಿ ಟೇಪ್ ನಿಂದ ಸುಮಾರು 1 ಅಡಿ ಉದ್ದದ 1/2 ಅಡಿ ಅಗಲದ ಚೌಕಕಾರವಾಗಿ ಟೇಪ್ ನಿಂದಲೇ ಸುತ್ತಿದ ಸುಮಾರು 3 ಇಂಚು ದಪ್ಪದ ಇಟ್ಟಿಗೆ ಆಕಾರ ಮಾಡಿದ ಒಂದು ವಸ್ತುವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮ-2 ಎಂದು ಗುರುತಿಸಲಾಯಿತು. 1 ಸಾವಿರ ಮುಖಬೆಲೆಯ ಒಂದು ಕರೆನ್ಸಿ ನೋಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮ-3 ಎಂದು ಗುರುತಿಸಲಾಯಿತು. ಒಂದು 500 ಮುಖಬೆಲೆಯ ಒಂದು ಕರೆನ್ಸಿ ನೋಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮ-4 ಎಂದು ಗುರುತಿಸಲಾಯಿತು. ಒಂದು 100 ರೂ ಮುಖಬೆಲೆಯ ಕರೆನ್ಸಿ ನೋಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮ-5 ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಅಮಾನತ್ತುಪಡಿಸಿಕೊಳ್ಳಲಾದ ಮೋಟಾರ್ ಸೈಕಲ್ ನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆಯಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಡಿ ಕೆ ವಕೀಲರಿಂದಃ-**

ಆರೋಪಿಗಳು ಕೆ ಎಂ ಎಫ್ ಮುಂಭಾಗದಲ್ಲಿ ಆ ದಿನ ನಿಂತಿದ್ದರು. ಬೆಂಗಳೂರು ಕಡೆಗೆ ಇರುವ ಕೆ ಎಂ ಎಫ್ ಮುಂಭಾಗದಲ್ಲಿ ನಿಂತಿದ್ದರು. ಆರೋಪಿಗಳು ರಸ್ತೆಯ ಪಕ್ಕದಲ್ಲಿ ನಿಂತಿದ್ದರು. ನನ್ನ ಮಹಜರ್ ನಲ್ಲಿ ಕೆ ಎಂ ಎಫ್ ಮುಂಭಾಗದಲ್ಲಿ ನಿಂತಿದ್ದರು ಎಂದು ಬರೆದಿರುತ್ತೇನೆ. ನಾವು ವಶಪಡಿಸಿಕೊಂಡ 1000, 500 ಮುಖ ಬೆಲೆಯ ಛಾಯಾಚಿತ್ರವನ್ನು ಹಾಕಿರುತ್ತೇವೆ ಅದರ ಸಂಖ್ಯೆಗಳನ್ನು ಬರೆದಿರುವುದಿಲ್ಲ. ಕರ್ನಾಟಕ ಪೊಲೀಸ್ ಕಾಯ್ದೆ ಯಂತೆ ವಶಪಡಿಸಿಕೊಂಡ ವಸ್ತುಗಳ ಬಣ್ಣ ಮತ್ತು ಸಂಖ್ಯೆಯನ್ನು ಬರೆಯಬೇಕು ಎಂದು ಇದೆ ಎಂದರೆ ಸರಿ. ನಾನು ಛಾಯಾಚಿತ್ರವನ್ನು ಮಾತ್ರ ಹಾಕಿರುತ್ತೇನೆ. ಸಂಖ್ಯೆಗಳನ್ನು ನಮೂದು ಮಾಡಿಲ್ಲ. ಕರ್ನಾಟಕ ಪೊಲೀಸ್ ಕಾಯ್ದೆ

ನಿಯಮಾನುಸಾರ ಕಡ್ಡಾಯವಾಗಿ ಬಣ್ಣ ಮತ್ತು ಸಂಖ್ಯೆಯನ್ನು ಬರಬೇಕೆಂದು ನಮೂದು ಇದೆ ಎಂದರೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ವಶಪಡಿಸಿಕೊಂಡ ಬ್ಯಾಗಿನ ಕಂಪೆನಿ ಮತ್ತು ಬಣ್ಣವನ್ನು ನಮೂದು ಮಾಡಿಲ್ಲ, ಛಾಯಾಚಿತ್ರವನ್ನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾವುದೇ ದಾಳಿ ಮಾಡಿಲ್ಲ, ಯಾವುದೇ ಮೂರು ನೋಟುಗಳನ್ನು ವಶಪಡಿಸಿಕೊಂಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಕೆ ಎಂ ಎಫ್ ಮುಂಭಾಗದಲ್ಲಿ ನಂದಿನಿ ಸ್ಟಾಲ್ ಇದ್ದು, ಅಲ್ಲಿ ಸಾಕಷ್ಟು ಜನರು ತಿರುಗಾಡುತ್ತಾರೆಂದರೆ ನನಗೆ ಮಾಹಿತಿ ಇಲ್ಲ. ಅಲ್ಲಿ ಸಾಮಾನ್ಯವಾಗಿ ರಸ್ತೆಯಲ್ಲಿ ಯಾರು ನಿಲ್ಲುವುದಿಲ್ಲ, ನಂದಿನಿ ಸ್ಟಾಲ್ ನ ಪಕ್ಕದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಠಾಣಾ ಅಂಕಿಅಂಶಕೋಸ್ಕಾರ ಆ ದಿನ ಮಹಜರ್ ಕ್ರಮ ಜರುಗಿಸಿ ಆರೋಪಿಗಳಿಂದ ಮುದ್ದೆ ಮಾಲ್ ಗಳನ್ನು ವಶಪಡಿಸಿಕೊಂಡಿರುತ್ತೇವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ-6 ರವರ ಮಾತನ್ನು ಕೇಳಿಕೊಂಡು ಠಾಣಾ ಅಂಕಿಅಂಶಕೋಸ್ಕಾರ ಸೃಷಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ 500 ಮತ್ತು 1000 ರೂ ಮುಖಬೆಲೆಯ ಹಳೆಯ ನೋಟುಗಳು ಇಲ್ಲ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯವೇ ಆರ್ ಬಿ ಐ ನಿಯಮದ ಪ್ರಕಾರ ಹಳೆಯ ನೋಟುಗಳನ್ನು ನೀಡಿ ಹೊಸ ನೋಟುಗಳನ್ನು ತರಿಸಿಕೊಂಡಿರುತ್ತದೆ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಫಿ ಎಫ್ ನಂಃ 97/2015 ರಲ್ಲಿ ನೋಟುಗಳ ಬಣ್ಣ ಮತ್ತು ಸಂಖ್ಯೆಯನ್ನು ಮುದ್ರಿಸದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಕೆ ಎಂ ಎಫ್ ಮುಂಭಾಗದಲ್ಲಿ ಸಿ ಸಿ ಕ್ಯಾಮಾರಾವನ್ನು ಅಳವಡಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಮದ್ದೂರು.

ಸಾಕ್ಷಿ ಸಹಿ